# ವೇಗೋಪಾಸನೆ

ಹದಿನೆಂಟನೇ ಶತಮಾನದಲ್ಲಿ ಯೂರೋಪ್ ಖಂಡದಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿ ಕ್ರಮೇಣ ಪ್ರಪಂಚವನ್ನೆಲ್ಲಾ ಆವರಿಸಿ, ಮನುಷ್ಯನ ಅಂತರಂಗ ಬಹಿರಂಗ ಎರಡರ ಮೇಲೂ ಗಾಢವಾದ ಪರಿಣಾಮವನ್ನುಂಟು ಮಾಡಿತು. ಕೈಗಾರಿಕಾ ಕ್ರಾಂತಿಯ ಪೂರ್ವದಲ್ಲಿ ಮನುಷ್ಯ ತನ್ನ ಪಾಲಿಗೆ ದತ್ತವಾಗಿ ಬಂದಿದ್ದ ದೇಶ ಕಾಲಗಳ ಚೌಕಟ್ಟಿನಲ್ಲಿಯೇ ಬದುಕಲು ಪ್ರಯತ್ನಿಸುತ್ತಿದ್ದ. ಅವುಗಳನ್ನು ಮೀರಿ ತನ್ನ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳಲು ಸಾಧ್ಯವೆಂಬ ವಿಚಾರ ಅವನ ಕಲ್ಪನೆಯಲ್ಲಿತ್ತೇ ಹೊರತು ವಾಸ್ತವ ಸಂಗತಿಯಾಗಿರಲಿಲ್ಲ. ಕೈಗಾರಿಕಾ ಕ್ರಾಂತಿ ಮನುಷ್ಯನನ್ನು ತನ್ನ ಪಾಲಿನ ಕಾಲ ದೇಶಗಳ ಪರಿಧಿಯನ್ನು ದಾಟುವ ಸಾಹಸಕ್ಕೆ ಪ್ರಚೋದಿಸಿತು. ಯಂತ್ರಗಳ ನೆರವು ಪಡೆಯಲಾರಂಭಿಸಿದ ಮನುಷ್ಯ 'ವೇಗ'ದ ಬೆಂಬಲವನ್ನು ಗಳಿಸಿ ಕಾಲದ ಉಳಿತಾಯ, ಶ್ರಮದ ಉಳಿತಾಯ– ಎರಡನ್ನೂ ಸಾಧಿಸಿದ; ಜೊತೆಗೆ ಉತ್ಪಾದನಾ ಸಾಮರ್ಥ್ಯವನ್ನೂ ಹೆಚ್ಚಿಸಿಕೊಂಡ. ಪ್ರಾಣಿಗಳ ಸಹಾಯ ವಿಲ್ಲದೇ ಇಂಧನ ಯಂತ್ರಗಳಿಂದ ಚಲಿಸುವ ಸಾರಿಗೆ ಸಂಪರ್ಕ ಸೌಕರ್ಯಗಳಿಂದಾಗಿ ಕಡಿಮೆ ಅವಧಿಯಲ್ಲಿ ಹೆಚ್ಚು ದೂರ ಕ್ರಮಿಸುವ ಶಕ್ತಿಯನ್ನೂ ಗಳಿಸಿಕೊಂಡ. ಒಟ್ಟಿನಲ್ಲಿ ನಿಧಾನವಾಗಿ ಚಲಿಸುತ್ತಿದ್ದ ಬದುಕಿನ ಬಂಡಿ ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದ 'ವೇಗೋತ್ಕರ್ಷ' ಪಡೆಯುವಂತಾಯಿತು. ಅರ್ಥಾತ್ ಮನುಷ್ಯ ಜಗತ್ತಿನಲ್ಲಿ 'ವೇಗ' ಎಂಬುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಪ್ರಾಪ್ತವಾಯಿತು.

ಈ ದಿನಗಳಲ್ಲಂತೂ ನಾವು 'ವೇಗೋಪಾಸಕ'ರಾಗಿದ್ದೇವೆ. ಆಧುನಿಕ ಮಾನವ 'ಕಡಿಮೆ ಅವಧಿ, ಹೆಚ್ಚು ಗಳಿಕೆ' ಎಂಬುದನ್ನೇ ತನ್ನ ಬದುಕಿನ ಪಲ್ಲವಿಯನ್ನಾಗಿಸಿಕೊಂಡಿದ್ದಾನೆಂದರೆ ತಪ್ಪಲ್ಲ. ಶಿಕ್ಷಣ, ಕೃಷಿ, ಕ್ರೀಡೆ– ಹೀಗೆ ಬದುಕಿನ ಎಲ್ಲ ಕ್ಷೇತ್ರಗಳಿಗೂ ಈ ಮಾತು ಅನ್ವಯಿಸುತ್ತಿದೆ ಎನ್ನಬಹುದೇನೋ. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಹೊರಲಾರದಷ್ಟು ಪುಸ್ತಕಗಳನ್ನು ಹೊರಿಸಿ, ಅವರನ್ನು 'ಪಂಡಿತ'ರನ್ನಾಗಿಸಲು ನಾವು ಪ್ರಯತ್ನಿಸುತ್ತಿದ್ದೇವೆ. ಅಲ್ಪಾವಧಿಯಲ್ಲಿ ಹೆಚ್ಚು ಫಸಲು ಕೊಡುವ ಪ್ರಯೋಗಗಳನ್ನು ಕೃಷಿ ಕ್ಷೇತ್ರದಲ್ಲಿ ಮಾಡಿತ್ತಿದ್ದೇವೆ. ವಸ್ತುಗಳ ಉತ್ಪಾದನೆಯಲ್ಲಂತೂ ಯಂತ್ರಗಳ ನೆರವಿನಿಂದ ಅದ್ಭುತ ಫಲಿತಾಂಶಗಳನ್ನು ಪಡೆಯುತ್ತಿದ್ದೇವೆ. ಹಗಲು ರಾತ್ರಿಗಳ ವ್ಯತ್ಯಾಸಗಳನ್ನು ಅನುಭವಿಸದೆ, ದೇಶ ಪರದೇಶಗಳ ನಡುವಣ ಅಂತರವನ್ನು ಗಮನಿಸದೆ ದುಡಿಯುತ್ತಿರುವ ಆಧುನಿಕ ಮನುಷ್ಯ ಪ್ರಾಪಂಚಿಕ ದೃಷ್ಟಿಯಿಂದ ಅತ್ಯಂತ ಎತ್ತರಕ್ಕೆ ತಲುಪಿರುವುದು ಸುಳ್ಳಲ್ಲ. ಆದರೆ ಭಾವನಾತ್ಮಕವಾಗಿ ಆತ ಸೊರಗುತ್ತಿರುವುದನ್ನು ಮರೆಯುವಂತಿಲ್ಲ. 'ಪ್ರಗತಿ' ಎನ್ನುವುದನ್ನು ಆರ್ಥಿಕ ಪ್ರಗತಿಗಷ್ಟೇ ಸೀಮಿತಗೊಳಿಸಿಕೊಂಡಿರುವ ಆಧುನಿಕ ಮನುಷ್ಯ ಮಾನವೀಯ ಸಂಬಂಧಗಳಿಗೆ ಅಗತ್ಯವಾಗಿರುವ ಆರ್ದ್ರತೆ, ಸ್ನಿಗ್ಧತೆ, ಸಹಸ್ಪಂದನ, ಸಾಮರಸ್ಯ– ಮುಂತಾದ ಕೋಮಲ ಭಾವಗಳನ್ನು ಕಳೆದುಕೊಂಡು ಕೊರಡಾಗುತ್ತಿದ್ದಾನೆ. ವೇಗದ ಬೆನ್ನೇರಿ ಗಳಿಕೆಯನ್ನು ಬೇಟೆಯಾಡುತ್ತಿರುವ ಇಂದಿನ ಮನುಷ್ಯ ತನ್ನ ಅಂತರಂಗದ ಪಿಸುಮಾತುಗಳನ್ನು ಆಲಿಸುವ ವ್ಯವಧಾನವನ್ನೂ ಕಳೆದುಕೊಳ್ಳುತ್ತಿದ್ದಾನೆ.

'ಗಗನವನು ನೋಡು ಮೈ ನೀಲಿಗಟ್ಟುವ ತನಕ' ಎಂಬುದು ಕುವೆಂಪು ಅವರ ಮಾತು. ಮೈ ನೀಲಿಗಟ್ಟುವ ಮಾತಿರಲಿ, ಗಗನವನ್ನು ಒಂದು ಕ್ಷಣ ನಿಟ್ಟಿಸಲೂ ಬಿಡುವಿಲ್ಲದ ಮಂದಿಯೂ ಈ ಆಧುನಿಕ ಜಗತ್ತಿನಲ್ಲಿ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಒಂದು ಹೂವನ್ನು ನೋಡಿ ಆನಂದಿಸುವ, ಒಂದು ಹಕ್ಕಿಯ ಹಾಡನ್ನು ಕೇಳಿ ಸಂತೋಷಿಸುವ, ಒಂದು ಮುಗ್ಧ ಮಗುವಿನ ನಗೆಯನ್ನು ಕಂಡು, ಕೇಳಿ ಸುಖಿಸುವ ವ್ಯವಧಾನವಿಲ್ಲದ ಮಂದಿಯೂ ಇದ್ದಾರೆ. ನಮ್ಮ ಪೂರ್ವಜರು ಕಾಲವನ್ನು ಯುಗ, ಕಲ್ಪ– ಇತ್ಯಾದಿ ಮಾನಗಳಲ್ಲಿ ಕಲ್ಪಿಸಿಕೊಂಡು, ಕಾಲದ ಅನಂತತೆಯನ್ನು ಮನಸ್ಸಿಗೆ ತಂದುಕೊಳ್ಳುತ್ತಿದ್ದರು. 'ಕಾಲೋಹ್ಯಯಂ ನಿರವಧಿ ರ್ವಿಪುಲಾಚ ಪೃಥ್ವೀ' (ಕಾಲವು ಅನಂತವಾಗಿದೆ, ಭೂಮಿ ವಿಸ್ತಾರವಾಗಿದೆ) ಎಂದು ನಂಬಿ, ಬದುಕಿನ ಸುಂದರ ಕ್ಷಣಗಳನ್ನು ಸಾಧ್ಯವಾದಷ್ಟು ಆಸ್ವಾದಿಸುತ್ತಿದ್ದರು, ಆದರೆ ಇಂದಿನವರು ಕಾಲವನ್ನು ಮೈಕ್ರೋ, ನ್ಯಾನೋ ರೂಪದಲ್ಲಿ ಅತ್ಯಂತ ಸೂಕ್ಷ್ಮ ಕಣಗಳನ್ನಾಗಿ ವಿಭಜಿಸಿ, ಕ್ಷಣ ಕ್ಷಣಗಳನ್ನೇ ಲೆಕ್ಕ ಹಾಕುತ್ತಾ ಬದುಕಿನಲ್ಲಿ ಸಹಜವಾಗಿ ಲಭ್ಯವಾಗುವ ಆನಂದದಿಂದ ವಂಚಿತರಾಗುತ್ತಿದ್ದಾರೆ. ಅತ್ಯಂತ ಅಲ್ಪ ಕಾಲದಲ್ಲೇ ಮಹತ್ವವಾದುದನ್ನು ಸಾಧಿಸಲು ಹೆಣಗಾಡುತ್ತಿರುವ 'ವೇಗೋಪಾಸಕ'ರಿಗೆ ಬದುಕನ್ನು ಸವಿಯಲು ಬಿಡುವಾದರೂ ಎಲ್ಲಿ? **'What is this life, if full if care! we have no time to stand and stare!'** ಎಂದು ಒಬ್ಬ ಆಂಗ್ಲ ಕವಿ ನಿಟ್ಟುಸಿರು ಬಿಟ್ಟದ್ದು ಇಂಥ ಪರಿಸ್ಥಿತಿಗಾಗಿಯೇ!

■ **ವೈನತೇಯ**

## ಮಾತೇ ಮುತ್ತು

★ ಹೇಡಿಯಾದವರು ಪ್ರೀತಿಯನ್ನು ತೋರಲಾರರು. ಅದು ಧೈರ್ಯವಂತರ ಸೊತ್ತು.
–ಮಹಾತ್ಮ ಗಾಂಧೀಜಿ

★ ಒಂದು ಬಾಗಿಲು ಮುಚ್ಚಿದಾಗ ಇನ್ನೊಂದು ಬಾಗಿಲು ತೆರೆದಿರುತ್ತದೆ. ಆದರೆ ನಾವು ಮುಚ್ಚಿದ ಬಾಗಿಲ ಮುಂದೆಯೇ ಬಹಳ ಹೊತ್ತು ದುಃಖದಿಂದ ಕಾಯುತ್ತಿರುತ್ತೇವೆ. ತೆರೆದ ಬಾಗಿಲನ್ನು ಗಮನಿಸುವುದೇ ಇಲ್ಲ.
–ಅಲೆಗ್ಸಾಂಡರ್ ಗ್ರಹಾಂ ಬೆಲ್

★ ಕಟ್ಟೋರೆಲ್ಲ ಕವಿಗಳಲ್ಲ, ಹುಟ್ಟೋರೆಲ್ಲ ಭವಿಗಳಲ್ಲ;
ಕರು ಕೂಡ ಕಟ್ಟಿದ್ದುಂಟು, ಬಸವಣ್ಣನೂ ಹುಟ್ಟಿದ್ದುಂಟು.
–ದ.ರಾ.ಬೇಂದ್ರೆ

★ ಮಳೆ ಬಂದಾಗ ಎಲ್ಲ ಹಕ್ಕಿಗಳೂ ಮರದ ಆಶ್ರಯ ಪಡೆಯುತ್ತವೆ, ಆದರೆ ಹದ್ದುಗಳು ಮೋಡದಿಂದಲೂ ಮೇಲಕ್ಕೆ ಹೋಗಿ ಹಾರಾಡುತ್ತವೆ. ಸಮಸ್ಯೆ ಎಲ್ಲರಿಗೂ ಇದೆ, ಆದರೆ ಅದನ್ನು ಹೇಗೆ ಎದುರಿಸುತ್ತೀರಿ ಎನ್ನುವುದು ಮುಖ್ಯ.
–ಡಾ.ಎ.ಪಿ.ಜೆ. ಅಬ್ದುಲ್ ಕಲಾಂ

★ ಪ್ರೇಮದಲ್ಲಿ ಬೀಳುವುದು ಆಯ್ಕೆ ಅಲ್ಲ; ಆದರೆ ಆ ಪ್ರೇಮದಲ್ಲೇ ಸ್ಥಿರವಾಗಿ ನಿಲ್ಲುವುದು ಆಯ್ಕೆ.
–ಇಂಗ್ಲಿಷ್ ಸೂಕ್ತಿ

★ ಹೊಟ್ಟೆಯಲಿ ಹುಟ್ಟದೀ ಬೆಂಕಿ ವಿಲಯಾಗ್ನಿ ಸಮ/ ಏರುತಿದೆ ಎದೆಗೆ ಮನುಜತೆಯ ಚಿತೆಗೆ
ಕಟ್ಟು ಕಟ್ಟಳೆಗಳೆಲ್ಲ ಇದಕೆ ಕಟ್ಟಿಗೆಯಾಗಿ/ ಸುಟ್ಟೀತು ಮನುಕುಲವೆ ಇದರ ಹತಿಗೆ.
–ಗೋಪಾಲಕೃಷ್ಣ ಅಡಿಗ

★ ನಾವು ನಿರೀಕ್ಷಿಸಿದ್ದನ್ನೆಲ್ಲ ಕೊಡಬೇಕೆಂಬ ಯಾವ ಅನಿವಾರ್ಯತೆಯೂ ಜೀವನಕ್ಕಿಲ್ಲ.
–ಮಾರ್ಗರೆಟ್ ಮಿಶೆಲ್

★ ನೀವು ಓದದ ಯಾವ ಪುಸ್ತಕವನ್ನೂ ನಿಮ್ಮ ಮಕ್ಕಳಿಗೆ ಓದಲು ನೀಡಬೇಡಿ.
–ಜಾರ್ಜ್ ಬರ್ನಾರ್ಡ್ ಷಾ

★ ಕವಿಗಳು ದೇವರನ್ನು ಸೃಷ್ಟಿಸುತ್ತಾರೆ; ತತ್ವಜ್ಞಾನಿಗಳು ಅದನ್ನು ನಾಶ ಮಾಡುತ್ತಾರೆ.
–ಮಾರ್ಟಿ ರೂಬೆನ್

★ ನಿಮಗೆ ಸಮಸ್ಯೆಗಳು ಇಲ್ಲವಾದಲ್ಲಿ ಅದನ್ನು ಸೃಷ್ಟಿಸಿ. ಸಮಸ್ಯೆಗಳೇ ಇಲ್ಲವಾದರೆ ನೀವು ಬದುಕಿದ್ದು ನಿಮಗೆ ಗೊತ್ತಾಗುವುದೇ ಇಲ್ಲ.
–ಯು.ಜಿ.ಕೃಷ್ಣಮೂರ್ತಿ

★ ನಿಮ್ಮ ಜೀವನದಲ್ಲಿ ಸೂರ್ಯ ಮರೆಯಾದನೆಂದು ನೀವು ಅತ್ತರೆ, ಹೊಳೆಯುವ ನಕ್ಷತ್ರಗಳು ಕಾಣಿಸಲು ಕಣ್ಣೀರು ಅಡ್ಡಿಯಾಗುತ್ತದೆ.
–ರವೀಂದ್ರನಾಥ ಠಾಗೂರ್

★ ಧರ್ಮ ಎನ್ನುವುದು ಇರುವುದು ಪರಸ್ಪರ ಹೋರಾಡುವುದಕ್ಕಲ್ಲ; ನಮ್ಮ ಬದುಕಿಗೆ ಒಂದು ಉದ್ದೇಶ ಮತ್ತು ಅರ್ಥವನ್ನು ತುಂಬಲು.
–ಡಾ.ಜಾಕೀರ್ ಹುಸೈನ್

★ ದೇವರು ನನಗೆ ನಾನು ಬಯಸಿದ್ದನ್ನು ಏನನ್ನೂ ಕೊಡಲಿಲ್ಲ; ಆದರೆ ನನಗೆ ಅಗತ್ಯವಾದುದೆಲ್ಲವನ್ನೂ ಕೊಟ್ಟಿದ್ದಾನೆ.
–ಸ್ವಾಮಿ ವಿವೇಕಾನಂದ

★ ನಾವು ಆಡುವ ಮಾತು ಹೀಗಿರಲಿ ಗೆಳೆಯ ಮೃದುಮಾತು ಮೂಲೋಕ ಗೆಲ್ಲುವುದು ತಿಳಿಯ
–ಸು.ರಂ.ಎಕ್ಕುಂಡಿ